**ದಿನಾಂಕಃ 23.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎ.ಎಲ್.ಎಸ್ ವಕೀಲರಿಂದಃ**

ದಾವಾ ಅನುಸೂಚಿ ಸ್ವತ್ತಿನ ಸರ್ವೇ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತಿನ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತು ಊರಿನ ಪಕ್ಕದಲ್ಲಿರುವ ಜಮೀನು ಎಂದರೆ ಸರಿ. ಹುನಗನಹಳ್ಳಿ ಗ್ರಾಮದ ರಾಮಮಂದಿರದ ಹತ್ತಿರ ಇರುವ ಚೌಡಮ್ಮನ ಛಾವಣಿಯ ಪಕ್ಕದಲ್ಲಿರುವ ನಾಡಹೆಂಚಿನ ಮನೆಯಲ್ಲಿ ನಾನು ಮತ್ತು ನನ್ನ ಕುಟುಂಬದವರು ವಾಸವಾಗಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಚೌಡಮ್ಮನ ಛಾವಣಿಯ ಪಕ್ಕದಲ್ಲಿ ನಾಡಹೆಂಚಿನ ಮನೆ ಇದೆ, ಆದರೆ ನಾವು ಸದರಿ ಮನೆ ಮತ್ತು ದಾವಾ ಅನುಸೂಚಿ ಸ್ವತ್ತಿನಲ್ಲಿರುವ ಮನೆ ಎರಡು ಕಡೆ ವಾಸಿಸುತ್ತಿದ್ದೇವೆ ಎಂದು ನುಡಿಯುತ್ತಾರೆ. ನಿಡಿ-1 ರ ಛಾವಚಿತ್ರದಲ್ಲಿ ಕಾಣುವ ಮನೆಯಲ್ಲಿ ನಾವು ದನಕರುಗಳನ್ನು ಕಟ್ಟಿ ಹಾಕುತ್ತೇವೆ ಎಂದರೆ ಸಾಕ್ಷಿದಾರರು ನಾವು ಸದರಿ ಮನೆಯಲ್ಲಿ ದನಕರುಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಮನೆಯೊಳಗೆ ನಾವು ವಾಸಿಸುತ್ತಿರುವ ಛಾವಚಿತ್ರಗಳನ್ನು ಹಾಜರುಪಡಿಸಿದ್ದೇವೆ. ನಿಡಿ-1 ರ ಛಾವಚಿತ್ರದಲ್ಲಿ ಕಾಣುವ ಮನೆಯು ನಮ್ಮದೇ ಆಗಿರುತ್ತದೆ. ಸದರಿ ಮನೆಯನ್ನು ನಾವು ಸುಮಾರು 40 ವರ್ಷಗಳ ಹಿಂದೆ ವಾದಿಯಿಂದ ಖರೀದಿಸಿದ್ದೇವೆ. ನಾವು ವಾದಿಯಿಂದ ಸುಮಾರು 4 ಗುಂಟೆ ಜಮೀನನ್ನು ಖರೀದಿಸಿದ್ದೇವೆ. ಸದರಿ 4 ಗುಂಟೆಯ ಜಮೀನಿನಲ್ಲಿ 1 ಗುಂಟೆಯಲ್ಲಿ ಮನೆ ಇದ್ದು, ಉಳಿದ 3 ಗುಂಟೆ ಜಮೀನಿನಲ್ಲಿ ಹುಲ್ಲಿನ ಮೆದೆಯನ್ನು ಹಾಕಿಕೊಂಡು ಕಸವನ್ನು ಹಾಕಿಕೊಳ್ಳುತ್ತಿದ್ದೇವೆ ಎಂದು ನುಡಿಯುತ್ತಾರೆ. ನಮ್ಮ ಮನೆಯ ಹಿಂದೆ ತೆಂಗಿನ ತೋಟ ಇದೆ ಎಂದರೆ ಸರಿ. ಸದರಿ ತೆಂಗಿನ ಮರಗಳಿಂದ ಕೀಳುವ ತೆಂಗಿನ ಕಾಯಿಗಳನ್ನು ಹಾಕಿಕೊಳ್ಳಲು ಮತ್ತು ದನಕರುಗಳನ್ನು ಕಟ್ಟಿಕೊಳ್ಳಲು ನಿಡಿ-1 ರ ಛಾವಚಿತ್ರದಲ್ಲಿ ಕಾಣುವ ಮನೆ ಇದೆ ಎಂದರೆ ಸರಿಯಲ್ಲ.

ವಾದಿಯ ತಂದೆ ಮಾದೇಗೌಡರವರು ದಾವಾ ಅನುಸೂಚಿ ಸ್ವತ್ತನ್ನು ದಿನಾಂಕ 22.05.1961 ರ ನೋಂದಾಯಿತ ಕ್ರಯಪತ್ರದ ಮೂಲಕ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಯ ತಂದೆ ಮಾದೇಗೌಡರವರು ದಾವಾ ಅನುಸೂಚಿ ಸ್ವತ್ತನ್ನು ಖರೀದಿಸಿದ್ದಾಗ 36 ಗುಂಟೆ ಜಮೀನು ಇತ್ತು, ಆದರೆ ಸದರಿ ಜಮೀನನ್ನು ಅಳತೆ ಮಾಡಿದ್ದಾಗ 32 ಗುಂಟೆ ಮಾತ್ರ ಇತ್ತು ಎಂದರೆ ಸರಿಯಲ್ಲ. ಸದರಿ ದಾವಾ ಅನುಸೂಚಿ ಸ್ವತ್ತು ವಾದಿಗೆ ಅವರ ತಂದೆಯಿಂದ ವಾರಸು ಮೂಲಕ ಬಂದಿದೆ ಎಂದರೆ ಸರಿಯಲ್ಲ. ಸದರಿ 32 ಗುಂಟೆ ಜಮೀನಿನಲ್ಲಿ ವಾದಿಯು 4 ಗುಂಟೆ ಜಮೀನನ್ನು

ನಂಜೇಗೌಡ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ವಾದಿಯು ನಮ್ಮಗೂ ಕೂಡಾ 4 ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ನಮಗೆ ವಾದಿಯು ಯಾವಾಗ ಮಾರಾಟ ಮಾಡಿದ್ದರು ಎಂದು ನನಗೆ ದಿನಾಂಕ, ತಿಂಗಳು ಮತ್ತು ವರ್ಷ ನನಗೆ ಗೊತಿಲ್ಲ. ವಾದಿಯು ನಮಗೆ ಮಾರಾಟ ಮಾಡಿದ್ದ ಜಮೀನಿನ ನೋಂದಾಯಿತ ಕ್ರಯಪತ್ರ ನನ್ನ ಬಳಿ ಇರುತ್ತದೆ. ಸದರಿ ಕ್ರಯಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ನಾನು ಹೇಳಿದಂತೆ ವಾದಿಯು ಯಾವುದೇ ಕ್ರಯಪತ್ರವನ್ನು ನನಗೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಡಿ-4 ರಿಂದ 7 ರ ಕಂದಾಯ ರಸೀದಿಗಳು ಹುನಗನಹಳ್ಳಿ ಗ್ರಾಮದ ರಾಮಮಂದಿರ ಬಳಿ ಇರುವ ನಮ್ಮ ಮನೆಗೆ ಸೇರಿದ ರಸೀದಿಗಳು ಎಂದರೆ ಸರಿಯಲ್ಲ. ಸದರಿ ಮನೆಯ ಖಾತೆಯು ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿ ರಾಮಮಂದಿರ ಬಳಿ ಇರುವ ಮನೆಯ ದಾಖಲಾತಿಗಳನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ.

ದಾವಾ ಅನುಸೂಚಿ ಸ್ವತ್ತಿನಲ್ಲಿರುವ ಮನೆಯನ್ನು 1990 ರಲ್ಲಿ ಪಂಚಾಯತಿಯಿಂದ ಪರವಾನಿಗೆ ಪಡೆದುಕೊಂಡು ನಿರ್ಮಿಸಿರುತ್ತೇನೆ. ಸದರಿ ಪರವಾನಿಗೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ಮನೆಯ ಖಾತೆ ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ಮನೆಯು ಸರ್ವೇ ನಂ.8/9 ಎ ನಲ್ಲಿ ಇದೆ ಎಂದರೆ ಸರಿ. ಸದರಿ ಮನೆಯು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. ಸದರಿ ಸರ್ವೇ ನಂ.8/9 ಎ ನಲ್ಲಿ ವಾದಿಯು 1985 ರಲ್ಲಿಯೇ ದನಕರುಗಳನ್ನು ಕಟ್ಟಿಕೊಳ್ಳಲು ನಿರ್ಮಿಸಿದ್ದ ಕೊಟ್ಟಿಗೆ ಮನೆ ಎಂದರೆ ಸರಿಯಲ್ಲ. ನಿಡಿ-8 ಮತ್ತು 9 ರ ಬಿಲ್ ಗಳಲ್ಲಿ ನನ್ನ ಹೆಸರು ಇಲ್ಲ ಎಂದರೆ ಸರಿ. ಸದರಿ ಮನೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಯಲ್ಲಿ ನನ್ನ ಹೆಸರಿಗೆ ಖಾತೆ ದಾಖಲಾಗಿಲ್ಲ ಎಂದರೆ ಸರಿ. 2013 ರಲ್ಲಿ ಸದರಿ ಮನೆಯ ಖಾತೆಯನ್ನು ನಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಡಿ ಎಂದು ಕೋರಿ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಆ ಸಂದರ್ಭದಲ್ಲಿ ವಾದಿಯು ತಕರಾರು ಮಾಡಿದ್ದರಿಂದ ನನ್ನ ಹೆಸರಿಗೆ ಸದರಿ ಮನೆಯ ಖಾತೆ ವರ್ಗಾವಣೆಗೊಂಡಿದೆ ಎಂದರೆ ಸರಿಯಲ್ಲ.

ಈ ದಾವೆಯ 2 ನೇ ಪ್ರತಿವಾದಿಯು ಈ ದಾವೆ ಚಾಲ್ತಿಯಲ್ಲಿರುವಾಗ ತನ್ನ ಹೆಂಡತಿ ರೂಪಾರವರ ಹೆಸರಿಗೆ ಸರ್ಕಾರದಿಂದ ಅನುದಾನ ಪಡೆದುಕೊಂಡು ದಾವಾ ಅನುಸೂಚಿ ಸ್ವತ್ತಿನಲ್ಲಿ 35 X 25 ಅಡಿ ಅಳತೆಯಲ್ಲಿ ಆರ್.ಸಿ.ಸಿ ಮನೆ ನಿರ್ಮಿಸಿದ್ದಾರೆ ಎಂದರೆ ಸರಿ. ಸದರಿ ಮನೆ ನಿರ್ಮಿಸಲು 2 ನೇ ಪ್ರತಿವಾದಿಯು ಪಂಚಾಯತಿಯಿಂದ ಪರವಾನಿಗೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಈ

ದಾವೆಯ 2ನೇ ಪ್ರತಿವಾದಿ ನನ್ನ ದಾಯಾದಿ ಎಂದರೆ ಸರಿಯಲ್ಲ. ನನಗೂ ಮತ್ತು ವಾದಿಗೂ ಯಾವುದೇ ರಕ್ತಸಂಬಂಧ ಇರುವುದಿಲ್ಲ. 2013 ರಲ್ಲಿ ನಾನು ವಾದಿಯಿಂದ ದಾವಾ ಅನುಸೂಚಿ ಸ್ವತ್ತಿನಲ್ಲಿ ಸಾಗುವಳಿ ಮಾಡಿಕೊಂಡು ವಾಸ ಇರಲು ಅನುಮತಿಯ ಮೇರೆಗೆ ಸ್ವಾಧೀನ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಈ ದಾವೆ ಸಲ್ಲಿಸುವ ಪೂರ್ವದಲ್ಲಿ ದಾವಾ ಅನುಸೂಚಿ ಸ್ವತ್ತನ್ನು ತನಗೆ ಬಿಟ್ಟುಕೊಡಿ ಎಂದು ಕೋರಿ ತಮ್ಮ ವಕೀಲರ ಮೂಲಕ ನನಗೆ ಮತ್ತು ಇತರೆ ಪ್ರತಿವಾದಿಗಳಿಗೆ ನೋಟಿಸ್ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ನೋಟಿಸ್ ನನಗೆ ಜಾರಿಯಾಗಿದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲದೇ ಇರುವುದರಿಂದ ಸದರಿ ನೋಟಿಸ್ ಗೆ ನಾನು ಯಾವುದೇ ಪ್ರತ್ಯುತ್ತರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 06.02.2018 ರಿಂದ ನಾನು ಮತ್ತು ಇತರೆ ಪ್ರತಿವಾದಿಗಳು ಕಾನೂನುಬಾಹಿರವಾಗಿ ದಾವಾ ಅನುಸೂಚಿ ಸ್ವತ್ತಿನಲ್ಲಿ ಅಕ್ರಮ ಸ್ವಾಧೀನತೆ ಹೊಂದಿದ್ದೇವೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತನ್ನು ವಾದಿಗೆ ಬಿಟ್ಟುಕೊಡಬೇಕಾಗುತ್ತದೆ ಎಂಬ ದುರುದ್ದೇಶದಿಂದ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ, ಸುಳ್ಳು ದಾಖಲಾತಿಗಳನ್ನು ಹಾಜರುಪಡಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ.